ತಲೆ ತೂಗಿ ಕಾರನ್ನು ನಿಲ್ಲಿಸಿದರು ರೆವರೆಂಡ್. ಕಾರಿಂದ ಇಳಿದು ಫೋರೆನ್ಸಿಕ್ ಲ್ಯಾಬ್ ಒಳಕ್ಕೆ ಹೋಗಿ ತಜ್ಞ ಫಣಿಯನ್ನು ಭೇಟಿ ಮಾಡಿದರು.

'ಇಂಟರೆಸ್ಟಿಂಗ್ ಕೇಸ್ ರೆವರೆಂಡ್! ಇಲ್ಲಿಯವರೆಗೂ ನಾನು 'ಸ್ಪಾಟೇನಿಯಸ್ ಹ್ಯೂಮನ್ ಕಂಬಸ್ಚನ್' ಎಂಬುದನ್ನು ಕೇವಲ ಹೆಸರು ಓದಿ, ಕೇಳಿದ್ದೇ ವಿನಾಃ ನೋಡಿದ್ದು ಇದೇ ಮೊದಲ ಬಾರಿಗೆ. ಚರ್ಮವೆಲ್ಲಾ ಸುಟ್ಟು ಹೋಗಿದ್ದರೂ ಕೈಕಾಲುಗಳಿಗೆ ಚೂರು ಬೆಂಕಿಯೂ ತಾಗಿಲ್ಲ' ವಿವರಿಸಿದರು ಫಣಿ.

'ಲಂಗ್ಸ್‌ನಲ್ಲಿ ಕಾರ್ಬನ್ ತುಂಬಿದೆಯಾ? ಈ ಸ್ಪಾಂಟೇನಿಯಸ್ ಹ್ಯೂಮನ್ ಕಂಬಸ್ಚನ್ ಕೇಸ್‌ನಲ್ಲಿ ಒಮ್ಮೊಮ್ಮೆ ತಮ್ಮ ದೇಹ ಸುಡುವುದರ ಜೊತೆಗೆ ಲಂಗ್ಸ್ ಒಳಗೆ ಇಂಗಾಲದ ಹೊಗೆ ತುಂಬಿಯೂ ಮರಣ ಸಂಭವಿಸುತ್ತದೆ! ಅಖಿಲಾ ಕುಳಿತ್ತಿದ್ದ ಕಾರಿನ ಡೋರು, ಕಿಟಕಿ ಗ್ಲಾಸ್ ಎಲ್ಲವನ್ನೂ ಗಾಳಿಯಾಡದಂತೆ ಮುಚ್ಚಲಾಗಿದೆ.'

'ಮಾಮೂಲೇ... ಆದರೆ ದೇಹದ ಮೇಲ್ಭಾಗ ಸುಟ್ಟಿದೆಯಲ್ಲಾ...'

'ಹೌದು!' ಸಮ್ಮತಿಸಿದರು ರೆವರೆಂಡ್.

'ಅಷ್ಟು ಸಮಯ ಇರಲಿಲ್ಲ. ಕೂಡಲೇ ಅಖಿಲಾನ ಹೊರಕ್ಕೆಳೆದು, ಬೆಂಕಿ ಆರಿಸಿ, ಆಂಬ್ಯುಲೆನ್ಸ್‌ನಲ್ಲಿ ಆಸ್ಪತ್ರೆಗೆ ಸೇರಿಸಲಾಗಿತ್ತು. ಅಷ್ಟರೊಳಗೆ ಅವಳ ಸಾವು ಸಂಭವಿಸಿದೆ' ಹೇಳಿದರು ಫಣಿ.

'ನಾನೊಮ್ಮೆ ಹೆಣವನ್ನು ಪರಿಶೀಲಿಸಬಹುದಾ?' ಅನುಮತಿ ಕೇಳಿದರು ರೆವರೆಂಡ್.

'ಬೈ ಆಲ್ ಮೀನ್ಸ್! ಹಾಂ! ಬಾಡಿನ ಮುಟ್ಟದೇ ಹಾಗೇ ನಿಧಾನಕ್ಕೆ ನೋಡು.' ಹೆಣವನ್ನು ಅತ್ಯಂತ ಜಾಗರೂಕತೆಯಿಂದ ಪರಿಶೀಲಿಸತೊಡಗಿದರು ರೆವರೆಂಡ್. ಬೆಂಕಿ ಅನಾಹುತ ಕೇಸುಗಳಲ್ಲಿ ಸಾಕ್ಷ್ಯಾಧಾರಗಳು ಸಿಗುವುದು ಕಷ್ಟ. ಹೆಣವನ್ನು ಪರಿಶೀಲಿಸುತ್ತಾ ಪರಿಶೀಲಿಸುತ್ತಾ ಕೆನ್ನೆಯ ಭಾಗಕ್ಕೆ ತಲುಪಿದ ರೆವರೆಂಡ್, ಅಲ್ಲಿ ಕರಕಲಾಗಿ ಗಡ್ಡೆ ಕಟ್ಟಿರುವುದನ್ನು ಗಮನಿಸಿ, ಯೋಚಿಸಿ ಒಮ್ಮೆ ಪ್ರಶ್ನಾರ್ಥಕವಾಗಿ ಫಣಿಯತ್ತ ದಿಟ್ಟಿಸಿದರು.

ಫಣಿಯೂ ಗಮನಿಸಿ ಯೋಚಿಸತೊಡಗಿದರು...

★★★

ರೆವರೆಂಡ್ ಕಾರನ್ನು ಪರಿಶೀಲಿಸತೊಡಗಿದರು. ಅವರ ಮುಖ ಗಂಭೀರವಾಗಿದೆ. ಸುಟ್ಟುಹೋದ ಕಾರಿನ ಆಸನವನ್ನು ಪರಿಶೀಲಿಸಿದರು. ಯಾವುದೇ ಮೂಲ ಇಲ್ಲದೆ ಬೆಂಕಿ ಹತ್ತಿಕೊಳ್ಳುವುದಿಲ್ಲ. ದೇಹ ಸುಡುತ್ತಾದರೂ ತನ್ನಷ್ಟಕ್ಕೆ ತಾನು ಏನೂ ಇಲ್ಲದೆ ಬೆಂಕಿ ಹತ್ತಿ ಉರಿಯುವುದಿಲ್ಲ. ಬೆಂಕಿಯ ಒಂದು ಸೂಕ್ಷ್ಮ ಕಿಡಿಯಾದರೂ ಬೇಕೇ ಬೇಕು ಹೊತ್ತಿ ಉರಿಯಲು. ಕಾರೊಳಗೆ ಕುಳಿತಿದ್ದ ಅಖಿಲಾಗೆ ಬೆಂಕಿ ಸ್ಪರ್ಶಿಸಿದವರು ಯಾರು? ಅವರ ಮನಸ್ಸಿನಲ್ಲಿ ಸಂಶಯ ಮೊಳಕೆಯೊಡೆಯಿತು.

ಯೋಚಿಸುತ್ತಾ, ಕಾರನ್ನು ಪರಿಶೀಲಿಸುತ್ತಾ ಇದ್ದ ರೆವರೆಂಡ್ ದೃಷ್ಟಿ ಸೀಟಿನ ಕೆಳಗೆ ಹೋಯಿತು. ಅಲ್ಲಿ ಸುಟ್ಟಿದ್ದನ್ನು ನೋಡುತ್ತಲೇ ಗಂಭೀರರಾದರು.

ಸುತ್ತಲೂ ನೋಡಿದರು. ತನ್ನತ್ತಲೇ ಕುತೂಹಲದಿಂದ ನೋಡುತ್ತಿದ್ದ ಐಸ್‌ಕ್ರೀಂ ಪಾರ್ಲರ್ ಯಜಮಾನ ಫಯಾಜ್‌ನನ್ನು ನೋಡಿದರು.

ಕಾರಿಂದ ಇಳಿದು, ರಸ್ತೆ ದಾಟಿ, ಪಾರ್ಲರ್ ಕಡೆಗೆ ಹೆಜ್ಜೆ ಹಾಕಿದರು.

'ಆ ದಿನ ಕಾರಲ್ಲಿದ್ದ ಯುವತಿ ಸುಟ್ಟಾಗ ಪಾರ್ಲರ್‌ನಲ್ಲಿ ನೀವೇ ಇದ್ರಾ?'